6. ಉದ್ದೇಶಿಸುವ ಕಂಟ್ರಾಕ್ಟುದಾರರಿಗೆ ಅಪೇಕ್ಷಿತವಾದ ಯಿನ್ನು ಜಾಸ್ತಿ ಸಂಗತಿಗಳು, ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ಸ ವ ಗವರ್ಮೆಂಟ್ ಫಾರಂಗಳ ಸೂಪರ್‌ಟೆಂಡೆಂಟರವರ ಆಫೀಸಿನಲ್ಲಿ ವಿಚಾರಿಸಿ ಪಡೆಯಬಹುದು.

7. ಫಾರೆಸ್ಟುಗಳ ಸೂಪರ್‌ಟೆಂಡೆಂಟರವರು ಕಮ್ಮೀದರವ ಅಥವಾ ಮತ್ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲವು.

8. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತನ್ನ ದರಖಾಸ್ತುಪ್ರಕಾರ ಕ್ರಮವಾಗಿ ನಡೆದುಕೊಳ್ಳುವ ಬಗ್ಗೆ ಜಾಮೀನಿ ತರೀಕ್ ಫಾರೆಸ್ಟು ವಂದಕ್ಕೆ 150 ರೂಪಾಯಿ ಪ್ರಕಾರ ಖಡಿಪಾಜಿಟ್ಟು ಕಟ್ಟತಕ್ಕದ್ದಲ್ಲದೆ ಬಂದು ಕರಾರನ್ನೂ ಬರೆದು ಕೊಡತಕ್ಕದ್ದು.

ಸಿ. ಯೆಂ, ರಸ್ಸೆಲ್,
ಫಾರೆಸ್ಟು ವ ಗವರ್ಮೆಂಟ್ ಫಾರಂಗಳ ಸೂಪರ್‌ಟೆಂಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 17ನೇ ಮಾರ್ಚಿ 1887

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ಯ 1887—88ನೇ ಇಸವಿ ಸರ್ವಜಿತು ಸಂವತ್ಸರಕ್ಕೆ ಕೋಲಾರ ಡಿಸ್ಟ್ರಿಕ್ಟು ಗೋರೀಬಿದನೂರು ತಾಲ್ಲೂಕು ಸರ್ಕಾರ ಬಂಜರ್ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಕೋಲಾರ ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯೂಟಿ ಕಮ್ಮಿಷನರ್ ಸಾಹೇಬರವರ ಯಾ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರ ರೂಬರೂ 1887ನೇ ಇಸವಿ ಏಪ್ರಿಲ್ 21ನೇ ತಾರೀಖಿನಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡತ್ತೆ. ಈ ಹರಾಜು ಸದರೀ ತಾರೀಖು ದಿವಿ 12 ಘಂಟೆಗೆ ಪುರೂ ಆಗುತ್ತೆ.

2. ಹರಾಜು ಪೂರೈಸಿದ ವಡನೆ ಚಡ ಸವಾಲ್‌ದಾರನು ಹರಾಜು ಮೊಬಲಗಿಗೆ ಶೇಕಡಾ 25 ರೂಪಾಯಿ ಮೇರಿಗೆ ಶೇವಣಿ ಯಿಡಬೇಕು, ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿಯು ಡಿಪ್ಯೂಟಿ ಕಮ್ಮಿಷನರ್ ಸಾಹೇಬರಿಂದ ತಿಳಿಸಲ್ಪಟ್ಟ 7 ದಿವಸಗಳ ವಳಗಾಗಿ ಬಾಕೀ ಮೊಬಲಗು ಮತ್ತು ಪೂರಾ ಮೊಬಲಗ್ಯೆ ರೂಪಾಯಿ 1ಕ್ಕೆ 1 ಆಣೆ ಪ್ರಕಾರ ಲೋಕಲ್ ಸೆಸ್ ಸಹಾ ಪಾವತೀ ಮಾಡಬೇಕು. ಹಾಗೆ ಪಾವತೀ ಮಾಡದೇ ಯಿದ್ದರೆ ಶೇವಣಿ ಯಿಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು. ಮೇಲ್ಕಂಡ ಶೇವಣಿ ಮೊಬಲಗು ಯಿಡುವದಕ್ಕೆ ತಪ್ಪಿದರೂ ಅಥವಾ ಬಾಕೀ ಮೊಬಲಗನ್ನ ಪಾವತೀ ಮಾಡುವದಕ್ಕೆ ತಪ್ಪಿದರೂ ಹಕ್ಕು ಪುನಹ ಹರಾಜುಮಾಡಲ್ಪಡುವದು ಲುಕ್ಸಾನ್ ಮೊಬಲಗು ತಪ್ಪಿದ ಚಡ ಸವಾಲ್‌ದಾರನಿಂದಲೇ ವಸೂಲ್ಮಾಡಲ್ಪಡುವದು.

3. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮಿಗೋಸ್ಕರ ಸವಾಲ್ ಮಾಡುತ್ತಾರೆಯೇ ಅಥವಾ ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುತ್ತಾರೆಯೆ ತಿಳಿಸಬೇಕು. ಇತರರ ಯೇಜಂಟುಗಳಾಗಿ ಸವಾಲ್ ಮಾಡುವದಾಗಿ ಯಿದ್ದರೆ ಅವರಿಂದ ರುಜು ಮಾಡಲ್ಪಟ್ಟ ಮೊಖ್ತ್ಯಾರ್‌ನಾಮೆಯನ್ನ ಹಾಜರ್ಮಾಡಬೇಕು, ಹಾಗೆ ಹಾಜರ್ಮಾಡದೆ ಇದ್ದರೆ ಅಂಥಾವರ ಸವಾಲ್‌ಗಳು ತಿರಸ್ಕರಿಸಲ್ಪಡುವದು.

ಈ ಹರಾಜು ದಿವಾಣ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

ಸಿ. ಸುಬ್ಬರಾವ್,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 18

ಮೃತಪಟ್ಟ ಬದರಇರ್ಮಾಖಾನಾಯಿಕರ ಸ್ತಿ ವಿಷಯದಲ್ಲಿ—

ಅರ್ಜೀದಾರ ಸೈದ್ ಮೋರ್ಮೆಷಾಖಾದ್ರಿಯು, ಮೃತಪಟ್ಟ ಸದರೀ ಬದರಇರ್ಮಾಖಾನಾಯಿಕರಿಗೆ ಯೇಜಂಟ್ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ಸದರೀ ಮೋರ್ಮೆಷಾಖಾದ್ರಿಯು ಸದರೀ ಪಾಸ್ಥರಾಗಿ ಮೃತಪಟ್ಟ ಬದರಇರ್ಮಾಖಾನಾಯಿಕರ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ **ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.**